
ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕಿ

ಡಾ. ಶಾಂತಾ ಕರಡಿಗುಡ್ಡ ಅಭಿನಂದನ ಗ್ರಂಥ

# ಸಾರ್ಥಕ ಬದುಕು



ಸಂಪಾದಕರು :

ಡಾ. ಪ್ರಕಾಶ ಎನ್. ನರಗುಂದ

Scanned with OKEN Scanner

**SARTHAK BADUKU**
National Awardee Teacher
Dr. Shanta Karadigudd ABHINANDANDA GRANTH
Guledgudd, Taluku Guledgudd, Dist. Bagalkot - 587 203.

Editors : **Dr. Prakash N. Naragund**
Assistant Professor of Kannada
M.G.V.C. Degree College, Muddebihal.
Mob: +91 09986767832
**Shree Suresh Vagga**
Editor Suddi Anavaran (Weekly)
Guledgudd. Mob: +91 09916636449

Publisher : **Shri Vaibhav Publications**
Gadag

Copyright : Editor
Copies : 1000
ISBN : 978-81-937173-1-8
Year : 2019
Pages : 574+64 = 638
Paper : 70 GSM NS MAPLITHO
Price : 650
DTP : Shridevi M. Shekha

Printed at : J. P. PRINTS GADAG
Mobile : 9886708168

**'ಸಾರ್ಥಕ ಬದುಕು'**
ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕಿ ಡಾ. ಶಾಂತಾ ಕರಡಿಗುಡ್ಡ ಅಭಿನಂದನಾ ಗ್ರಂಥ
ವರ್ಷ : 2019
ಹಕ್ಕು : ಸಂಪಾದಕರು
ISBN : 978-81-937173-1-8
ಕಾಗದ : 70 GSM NS MAPLITHO
ಪುಟಗಳು : 574+64 = 638
ಪ್ರತಿಗಳು : 1000
ಬೆಲೆ : ರೂ. 650/-
ಅಕ್ಷರ ಜೋಡಣೆ : ಶ್ರೀ ಚಂದ್ರಶೇಖರ ನೀಲಕಂಠಪ್ಪ ಉಂಕಿ
ಮುದ್ರಣ : ಜೆ. ಪಿ. ಪ್ರಿಂಟ್ಸ್, ಗದಗ.
9886708168

Scanned with OKEN Scanner

# ಪರಿವಿಡಿ


ಸಂಪಾದಕರ ನುಡಿ

**ಭಾಗ–೧: ಪೂಜ್ಯರ ಆಶೀರ್ವಾದ ನುಡಿಗಳು**

**ಭಾಗ–೨: ನಾಡಿನ ಗಣ್ಯರ ಶುಭ ಹಾರೈಕೆಗಳು**

**ಭಾಗ–೩: ನನ್ನ ಬದುಕು – ಡಾ. ಶಾಂತಾ ಕರಡಿಗುಡ್ಡ** ೩

**ಭಾಗ–೪: ಅವರವರ ಭಾವಕ್ಕೆ ಡಾ. ಶಾಂತಾ ಕರಡಿಗುಡ್ಡ** ೩೧

| | | |
|---|---|---|
| ೧) ಬೆಂಕಿಯಲ್ಲಿ ಅರಳಿದ ಹೂ | ಡಾ. ಮುರ್ತುಜಾ ಬ. ಒಂಟಿ | ೩೩ |
| ೨) ನಾ ಕಂಡಂತೆ ಸಹೋದರಿ | ಪ್ರೊ. ಆಯ್. ಎಸ್. ಭಾವಿ | ೪೧ |
| ೩) ನನ್ನ ಜೀವದ ಗೆಳತಿ | ಸೋನಾ ಎಚ್ ಕಟಗೇರಿ | ೪೫ |
| ೪) ಕರ್ಪೂರದ ಗೊಂಬೆ | ಮಹೇಶ ಜಿ ಸತ್ತಿಗೇರಿ | ೪೮ |
| ೫) ನಾ ಕಂಡ ಡಾ. ಶಾಂತಾ | ವೈ. ಜಿ. ಬ್ಯಾಡಗಿ | ೫೨ |
| ೬) ಬದುಕು ರೂಪಿಸಿದ ಟೀಚರ್ | ಸಂಗಯ್ಯ ಚ ಸಿಂದಗಿಮಠ | ೫೫ |
| ೭) ಹೀಗೊಬ್ಬಳು ಸಂತ ಶಿಕ್ಷಕಿ | ಚಂದ್ರಕಾಂತ ಮ ತಾಳಿಕೋಟಿ | ೫೮ |
| ೮) ಶಾಂತಾ ನನ್ನ ಮಗಳಿಗಿಂತ ಹೆಚ್ಚು | ದಯಾನಂದ ಜೀ ಕರಡಿಗುಡ್ಡ | ೬೧ |
| ೯) ನನ್ನ ಸಹೋದರಿ | ಭಾಸ್ಕರ ಎ ಕರಡಿಗುಡ್ಡ | ೬೩ |
| ೧೦) ಸ್ನೇಹಮಯಿ ಡಾ. ಶಾಂತಾ | ಎಸ್. ಎಫ್. ಜೀವರಗಿ | ೬೫ |
| ೧೧) ಸಾತ್ವಿಕ ಸಹೃದಯಿ | ಡಾ. ಭೀಮನಗೌಡ ಫ ಪಾಟೀಲ | ೬೭ |
| ೧೨) ಅಕ್ಕರೆಯ ಶಾಂತಕ್ಕನವರು | ಡಾ. ಯು. ಕೆ. ನಂದನೂರ | ೬೯ |
| ೧೩) ನನಗೆ ಸ್ಫೂರ್ತಿ ಶಾಂತಾ ಟೀಚರ್ | ಸುಜನ್ ಭಾ ಕರಡಿಗುಡ್ಡ | ೭೫ |
| ೧೪) ಮಾನವೀಯತೆಯ ಪ್ರತಿರೂಪ | ರೂಪಾ ನಾ ಬೆಳಗಲ್ಲ | ೭೮ |
| ೧೫) ಸ್ಫೂರ್ತಿಯ ಚಿಲುಮೆ | ಬಸವರಾಜ ಎಸ್ ಹಕ್ಕಿ | ೮೨ |
| ೧೬) ಗುಳೇದಗುಡ್ಡದ ಹೆಮ್ಮೆಯ ಶಿಕ್ಷಕಿ | ಎಸ್. ಎಸ್. ಬೆಕಿನಾಳ | ೮೫ |
| ೧೭) ಅಕ್ಷರ ಯೋಗಿನಿ | ಲಕ್ಷ್ಮಣ ಎಸ್. ಚೌರಿ | ೮೭ |
| ೧೮) ಮಮತೆಯ ಶಿಕ್ಷಕಿ | ಡಾ. ಲೋಕಣ್ಣ ಭಜಂತ್ರಿ | ೯೦ |
| ೧೯) ಶಿಕ್ಷಣ ಪ್ರೇಮಿ | ಬಿ. ಎಸ್. ಕೆರೂರ | ೯೪ |
| ೨೦) ಶಾಂತಕ್ಕ ನನ್ನ ತಾಯಿ | ಡ್ಯಾನಿಯಲ್ ಎ ಕರಡಿಗುಡ್ಡ | ೯೮ |
| ೨೧) ಶಾಂತಮೂರ್ತಿ ಶಾಂತಕ್ಕ | ಪ್ರೊ. ಸಿ. ವ್ಹಿ. ತಿಪ್ಪಾ | ೧೦೧ |
| ೨೨) ಸ್ಮರಣೀಯ ಸಾಧನೆಯ ಗುರುಮಾತೆ | ಜೆ. ಡಿ. ಮಣ್ಣೂರ | ೧೦೩ |


Scanned with OKEN Scanner

| | | |
|---|---|---|
| ೧೬) ಆಧುನಿಕ ಮಹಿಳೆ ಮತ್ತು ಉದ್ಯೋಗ | ಡಾ. ರಾಮು ಹಸನಪ್ಪ ಸಜ್ಜನ | ೩೧೦ |
| ೧೭) ವಿಶ್ವಗುರು ಬಸವಣ್ಣನವರು | ಪ್ರೊ. ಚಂದ್ರಶೇಖರ ಎಂ. ಕಾಳನ್ನವರ | ೩೧೫ |
| ೧೮) ಬೆಳ್ವೊಲ-೩೦೦ ಶಾಸನಗಳಲ್ಲಿ ಸಾಮಾಜಿಕ ಸ್ಥಿತಿಗತಿಗಳು | ಪ್ರೊ. ಸಿದ್ಧಲಿಂಗೇಶ ಉ. ಸಜ್ಜನಶೆಟ್ಟರ | ೩೨೦ |
| ೧೯) ಹುಬ್ಬಳ್ಳಿ ಮೂರುಸಾವಿರಮಠದ ಸಾಹಿತ್ಯ ಸೇವೆ | ಡಾ. ಸುರೇಶ ಹನಗಂಡಿ | ೩೨೫ |
| ೨೦) ಸೂಫಿ ಪರಂಪರೆ ಮತ್ತು ಸಮುದಾಯ ಸಂಸ್ಕೃತಿ | ಹನುಮಂತಗೌಡ ಆರ್. ಕಲ್ಮನಿ | ೩೩೩ |
| 21) Environmental Education as an approach to Sustainable Development | Dr. H. A. Katagur | 340 |
| ೨೨) ಗುಳೇದಗುಡ್ಡ ಸ್ಥಳ ಮಹಿಮೆ | ಹನುಮಂತ ಆರ್. ವಾಲಿಕಾರ | ೩೫೦ |
| ೨೩) ಮಕ್ಕಳ ಶ್ರೇಯೋಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ | ನಾಗಪ್ಪ ಹ ಮಾದರ | ೩೫೬ |
| ೨೪) ಕನ್ನಡ ನಾಡಿಗೆ ಕ್ರೈಸ್ತ ಮಿಶನರಿಗಳ ಕೊಡುಗೆ | ವಿಜಯಕುಮಾರ ಪುನೀತ | ೩೬೦ |
| ೨೫) ಉದ್ಯೋಗ ಕ್ಷೇತ್ರದಲ್ಲಿ ಮಹಿಳೆ | ಡಾ. ಪರವಿನಕೌಸರ ಇ. ಮೋಮಿನ | ೩೬೬ |
| ೨೬) ಸ್ತ್ರೀವಾದಿ ಸಾಹಿತ್ಯ ಚಿಂತನೆ | ಬಸಮ್ಮ ನರಸಾಪೂರ | ೩೬೯ |
| ೨೭) ಕನ್ನಡದ ಅಭಿಮಾನ | ರೀಟಾ ವಸಂತ ಕರಡಿಗುಡ್ಡ | ೩೭೨ |
| ೨೮) ಸಮಾಜದಲ್ಲಿ ಗುರು-ಶಿಕ್ಷಕರ ಪಾತ್ರ | ಸುಲೋಚನಾ ಜ ಹಿರೇಕೋಡಿ | ೨೭೮ |
| ೨೯) ಕನಕದಾಸರ ಬದುಕು ಮತ್ತು ಹೋರಾಟ | ಡಾ. ಎಂ. ಎಲ್. ಉಗಲವಾಟ | ೩೮೫ |
| ೩೦) ಏಳೂರ ಒಡೆಯ ಯಲಗೂರದ ಶ್ರೀ ಯಲಗೂರೇಶ್ವರ | ಪ್ರೊ. ಅನ್ನಪೂರ್ಣ ಎಸ್. ಚನ್ನಿನಾವಿ | ೩೯೧ |
| ೩೧) ತಾಲಿಬಾನಿಗಳು | ಎಸ್.ಎಮ್. ನಿಂಬಲಗುಂದಿ | ೩೯೮ |
| ೩೨) ಮಹಿಳಾ ದೌರ್ಜನ್ಯ ಮತ್ತು ಕಾನೂನುಗಳು | ಡಾ|| ಪರಶುರಾಮ ಚಂದಪ್ಪ | ೩೯೮/೭ |
| ೩೩) Global Warming : Causes, Effects and Solutions | Abdulrazak Shekhasaheb Bagawan | ೩೯೮/೧೪ |
| ೩೪) ಸಮರಕಲೆ : ಮಲ್ಲಕಂಬ | ಚಿದಾನಂದ ಕೆ. ನಂದಾರ | ೩೯೮/೩೨ |
| ೩೫) Impact of pesticides on human health | Katageri C.S. & Benal S.N. | ೩೯೮/೪೦ |
| ೩೬) ಭಾರತದಲ್ಲಿ ಲೋಕಪಾಲ ಮತ್ತು ಲೋಕಾಯುಕ್ತ | ಪ್ರೊ. ಎಮ್.ಎಮ್. ಪಾಟೀಲ | ೩೯೮/೪೭ |


**ಭಾಗ-೬ : ಅನುಬಂಧಗಳು**


| | |
|---|---|
| ೧) ಡಾ. ಶಾಂತಾ ಕರಡಿಗುಡ್ಡ ಅವರ ವಂಶಾವಳಿ | ೪೦೧ |
| ೨) ಡಾ. ಶಾಂತಾ ಕರಡಿಗುಡ್ಡ ಅವರ ಪರಿಚಯ | ೪೦೬ |
| ೩) ಸಂಪಾದಕರ ಪರಿಚಯ | ೪೦೯ |
| ೪) ಪತ್ರಿಕಾ ವರದಿಗಳು | ೪೧೧ |
| ೫) ಛಾಯಾಚಿತ್ರಗಳು | |

**Title-** Flower Blossomed in Fire
- Dr. M. B. Onti

# ಬೆಂಕಿಯಲ್ಲಿ ಅರಳಿದ ಹೂ

– ಡಾ. ಮುರ್ತುಜಾ ಬ. ಒಂಟಿ

ಈ ಮೇಲಿನ ಉಕ್ತಿ (ಶೀರ್ಷಿಕೆ) ಜನಸಾಮಾನ್ಯರಿಗೆ ತಿಳಿಯದೆ ಹೋಗಬಹುದಾಗಿದೆ. ಜೊತೆಗೆ ಅಚ್ಚರಿಯನ್ನು ಹುಟ್ಟಿಸಬಹುದಾಗಿದೆ. ಬೆಂಕಿಯಲ್ಲಿ ಹೂ ಹೇಗೆ ಅರಳುತ್ತದೆ? ಬೆಂಕಿ ಹೂವನ್ನು ಅರಳಿಸುವ ಬಳ್ಳಿಯೇ! ಗಿಡವೇ! ಎಂದು ಉದ್ಗಾರ ತೆಗೆಯಲುಬಹುದು. ಇದು ಅವರಿಗೆ ಸಹಜ ಯಾಕೆಂದರೆ, ಅವರ ವಿಚಾರಶಕ್ತಿ ಅಷ್ಟೆ ಆದರೆ ಅಪಾರವಾದ ಲೋಕಾನುಭವವುಳ್ಳ ಪ್ರಜ್ಞಾವಂತರಿಗೆ, ಸಾಹಿತ್ಯ ಶಕ್ತಿಯ ಧ್ವನ್ಯರ್ಥ ಬಲ್ಲ ಸಹೃದಯರಿಗೆ ಅರ್ಥ ಆಗಬಲ್ಲದು. ಬದುಕಿನ ಬಹುಪಾಲು ಭಾಗ ಅನುಭವಿಸಿದ ಅಪಾರ ನೋವು, ಸಂಕಟ, ವೇದನೆ ಹಾಗೂ ಪರರ ಕಿರುಕಳ, ಅಸಮಾಧಾನ, ಹೊಟ್ಟೆಕಿಚ್ಚು, ದ್ವೇಷಾಗ್ನಿಯಲ್ಲಿ ಬೆಂದೂ ಬಾಳ್ವೆಯನ್ನು ಪರಿಮಳವಾಗಿಸಿಕೊಂಡ ಕುಸುಮಗಳೆಷ್ಟೋ ಇರುವುದನ್ನು ಕಂಡಿದ್ದೇವೆ, ಕೇಳಿದ್ದೇವೆ. ಪ್ರಸ್ತುತ ಸಂದರ್ಭದಲ್ಲೂ ನೋಡುತ್ತೇವೆ.

ಬಾಗಲಕೋಟ ಜಿಲ್ಲೆಯ ಗುಳೇದಗುಡ್ಡ ಪಟ್ಟಣ ಸೀರೆಯ ಖಣಕ್ಕೆ, ಜಿಲೇಬಿ–ರಬ್ಡಿಗೆ ಹೆಸರಾದುದು. ನೇಕಾರಿಕೆ ಅಲ್ಲಿನ ಜನರ ಜೀವನಾಡಿಯಾದರೂ ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಗುರುತಿಸಲ್ಪಡುವಂಥದ್ದು. ಸಾಹಿತ್ಯ ಸಂಗೀತ, ರಂಗಭೂಮಿಯಂಥ ಕಲೆಗಳ ದೃಷ್ಟಿಯಿಂದಲೂ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಇಂಥ ಹಲವು ವಿಶೇಷಣಗಳಿಂದ ಕೂಡಿದ ಆ ನಗರದಲ್ಲಿ ಕ್ರೈಸ್ತ ಧರ್ಮಕ್ಕೆ ಸೇರಿದ ಕರಡಿಗುಡ್ಡ ಎಂಬ ಹೆಸರಿನ ಮನೆತನ ಒಂದಿದೆ. ಅದು ಇಂದು ಗುರುತಿಸಲ್ಪಡಬಹುದಾದ ಮನೆತನ ಅದರ ಹಿರಿಮೆಗೆ ಕಾರಣರಾದವರಲ್ಲಿ ಡಾ. ಶಾಂತಾ ಕರಡಿಗುಡ್ಡ ಅವರ ಹೆಸರನ್ನು ಮರೆಯುವಂತಿಲ್ಲ.

ಡಾ. ಶಾಂತಾ ಅವರು ವೃತ್ತಿಯಿಂದ ಪ್ರಾಥಮಿಕ ಶಾಲಾ ಶಿಕ್ಷಕಿ. ನಾಲ್ಕು ದಶಕ (೪೦ ವರ್ಷ)ಗಳ ಸುದೀರ್ಘ ಶಾಲಾವಧಿಯ ವೃತ್ತಿ ಬದುಕಿನಲ್ಲಿ ಸಹ ಶಿಕ್ಷಕಿಯಾಗಿ, ಮುಖ್ಯ ಗುರುಮಾತೆಯಾಗಿ ನಿಃಸ್ವಾರ್ಥದಿಂದ ಸೇವೆ ಸಲ್ಲಿಸುವ

ಮೂಲಕ ಸೇವೆಗೆ ಅರ್ಥವಂತಿಕೆಯನ್ನು ತಂದು ಕೊಟ್ಟಿದ್ದಾರೆ. ಅಲ್ಲದೆ ಸಾಮಾಜಿಕಧಾರ್ಮಿಕ, ಸಾಹಿತ್ಯ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ಗುರುತಿಸಿಕೊಂಡವರು.

ಅವರ ಬದುಕೇ ಹೋರಾಟಮಯವಾದುದು ಜೀವನದಲ್ಲಿ ಎದುರಾದ ಸಮಸ್ಯೆಗಳಿಗೆ, ಆತಂಕಗಳಿಗೆ ಹೆದರದೆ, ಬಂದ ಎಲ್ಲ ಎಡರು-ತೊಡರುಗಳನ್ನು ಧೈರ್ಯದಿಂದ, ಬುದ್ಧಿಶಕ್ತಿಯಿಂದ, ಸ್ವಸಾಮರ್ಥ್ಯದಿಂದ ಎದುರಿಸಿ ಮುಂದೆ ಬಂದವರು. ಸ್ತ್ರೀ ಅಬಲೆಯಲ್ಲ ಸಬಲೆ, ಅವಳಿಗೂ ತನ್ನದೆ ಆದ ಶಕ್ತಿ-ಸಾಮರ್ಥ್ಯಯಿದೆ. ಮನಸ್ಸು ಮಾಡಿದರೆ ಆಕೆಯೂ ಏನೆಲ್ಲ ಮಾಡಿ ತೋರಿಸಬಲ್ಲಳು, ಏನನ್ನಾದರೂ ಸಾಧಿಸಬಲ್ಲಳೆಂಬುದನ್ನು ಸಾಬೀತುಪಡಿಸಲು ಸಾಕ್ಷಿಯಂತಿದ್ದಾರೆ ಶಾಂತಾರು.

೧೯೫೮ ಜುಲೈ ೧ ರಂದು ಆನಂದಪ್ಪ ಹಾಗೂ ಮೇರಿ ದಂಪತಿಗಳ ಮುದ್ದಿನ ಮೂರನೇ ಮಗಳಾಗಿ ಶಾಂತಾ ಜನ್ಮತಾಳಿದರು. ಗುಳೇದಗುಡ್ಡ, ಧಾರವಾಡ ಜಿಲ್ಲೆಯ ಬ್ಯಾಹಟ್ಟಿ, ಹುಬ್ಬಳ್ಳಿಗಳಲ್ಲಿ, ಪ್ರಾಥಮಿಕ, ಪ್ರೌಢ ಶಾಲೆಯ ಶಿಕ್ಷಣವನ್ನು ಪಡೆದಿರುವರು. ಟಿ.ಸಿ.ಎಚ್. ಶಿಕ್ಷಣವನ್ನು ಇಲಕಲ್ಲನಲಿ ಪೂರೈಸಿದ್ದಾರೆ. ಅವರಿಗೆ ಉನ್ನತ ವ್ಯಾಸಂಗವನ್ನು ಮಾಡಬೇಕು ಎನ್ನುವ ಕನಸು ಇತ್ತು ಹೊರತು ಶಿಕ್ಷಕಿಯಾಗುವ ಆಸೆ ಇರಲಿಲ್ಲ. ಆದರೆ ಮನೆತನದ ಜವಾಬ್ದಾರಿಯನ್ನು ನಿಭಾಯಿಸುವ ಒತ್ತಡ ಅವರ ಮೇಲೆ ಬಿದ್ದುದರಿಂದ ಅನಿವಾರ್ಯವಾಗಿ ಪ್ರಾಥಮಿಕ ಶಾಲಾ ಶಿಕ್ಷಕಿಯಾಗುವ ಪರಿಸ್ಥಿತಿ ಒದಗಿ ಬಂದಿತು. ಶಾಂತಾರು ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಅಂದರೆ, ೦೧-೦೭-೧೯೭೮ ರಲ್ಲಿ ಗುಳೇದಗುಡ್ಡದ 'ಬಾಸೆಲ್ ಮಿಶನ್ ಗಂಡು ಮಕ್ಕಳ ಪ್ರಾಥಮಿಕ ಶಾಲೆ'ಯಲ್ಲಿ ಸಹಶಿಕ್ಷಕಿಯಾಗಿ ಹಾಜರಾಗುವ ಮೂಲಕ ವೃತ್ತಿಬದುಕಿಗೆ ಕಾಲಿಟ್ಟರು. ಒಂದು ಅಚ್ಚರಿಯ ವಿಷಯವೇನೆಂದರೆ, ಅವರು ತಮ್ಮ ಹುಟ್ಟುಹಬ್ಬದ ದಿನವಾದ ಜುಲೈ ೦೧ ರಂದೇ ನೌಕರಿಗೆ ಸೇರಿದ್ದು. ಅವರ ಜನ್ಮ ದಿನಾಂಕ ೦೧-೦೭-೧೯೫೮. ವೃತ್ತಿ ಜೀವನಕ್ಕೆ ಪಾದಾರ್ಪಣೆ ಮಾಡಿದ್ದು ಜುಲೈ ೧, ೧೯೭೮ ರಲ್ಲಿ ಇನ್ನು ನಿವೃತ್ತಿ ಹೊಂದಿರುವುದು ೨೦೧೮ ರಲ್ಲಿ ಈ ೦೮ ನಂಬರಿನ ನಂಟು ಅವರದು. ಇನ್ನೊಂದು ಸೋಜಿಗವೆಂದರೆ, ೧೯೭೮, ಜುಲೈ ೦೧, ಶನಿವಾರಧಂದು ನೌಕರಿಗೆ ಹಾಜರಾಗಿದ್ದರು. ೨೦೧೮ ಜೂನ್ ೩೦ ಶನಿವಾರ ದಿವಸ ಅವರು ಸೇವೆಯಿಂದ ನಿವೃತ್ತರಾದರು. ಈ ಕೆಲ ಅಂಶಗಳು ನಿಜವಾಗಿಯೂ ವಿಸ್ಮಯವನ್ನುಂಟು ಮಾಡುತ್ತವೆ.

ಕೆಲವರು ತಾವು ಇಷ್ಟಪಡುವ ನೌಕರಿಗೆ ಎಷ್ಟು ವಿದ್ಯಾರ್ಹತೆ ಬೇಕೋ ಅಷ್ಟನ್ನು ಮಾತ್ರ ಪಡೆಯುತ್ತಾರೆ. ಹೆಚ್ಚಿನ ಓದಿಗೆ ಅವರು ಮನಸ್ಸು ಮಾಡುವದಿಲ್ಲ. ಆದರೆ ಇನ್ನು ಕೆಲವರು. ಈ ಮಾತಿಗೆ ವ್ಯತಿರಿಕ್ತರಾಗಿರುತ್ತಾರೆ. ಶಾಂತಾ ಅವರು ಎರಡನೆಯ ವರ್ಗದವರ ಸಾಲಿಗೆ ಸೇರಿದವರು. ಎಸ್.ಎಸ್.ಎಲ್.ಸಿ. ಯ ಮೇಲೆ ಟಿ.ಸಿ.ಎಚ್. ಮುಗಿಸಿ ಪ್ರಾಥಮಿಕ ಶಾಲಾ ಶಿಕ್ಷಕಿ ಹುದ್ದೆಯನ್ನು ಅಲಂಕರಿಸಿದ್ದರು.

ಅಷ್ಟಕ್ಕೆ ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಬಹುದಾಗಿತ್ತು. ಹಾಗೆ ಮಾಡಲಿಲ್ಲ. ಅವರು ಪಿ.ಯು.ಸಿ., ಬಿ.ಎ., ಬಿ.ಎಡ್., ಎಂ.ಎ., ಎಂ.ಎಡ್. ಹಾಗೂ ಪಿ.ಹೆಚ್.ಡಿ ವರೆಗಿನ ಪದವಿಗಳನ್ನು ನೌಕರಿ ಮಾಡುತ್ತ ಬಾಹ್ಯ ವಿದ್ಯಾರ್ಥಿಯಾಗಿ ಈ ಎಲ್ಲ ಪದವಿಗಳನ್ನು ಪಡೆದರೂ ನಿಯತ ವಿದ್ಯಾರ್ಥಿಯಾಗಿ ಪಡೆದಷ್ಟೇ ಅಂಕಗಳನ್ನು ಪಡೆದಿರುವುದು ಶಾಂತಾ ಅವರ ಬುದ್ಧಿಶಕ್ತಿ ಮತ್ತು ಪ್ರತಿಭೆಯನ್ನು ಸಾಕ್ಷೀಕರಿಸುವಂತಿದೆ. "Swim like a swan in the knowledge of ocean" ಎನ್ನುವಂತೆ ಜ್ಞಾನ ಸಾಗರದಲ್ಲಿ ಈಜಲು ಪ್ರಯತ್ನಿಸಿದ ಪ್ರತಿಭೆ ಶಾಂತಾ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಎನಿಸುತ್ತದೆ.

ಅವರು ಅಷ್ಟೇನೂ ಆರ್ಥಿಕವಾಗಿ ಸ್ಥಿತಿವಂತರಲ್ಲದ ಕುಟುಂಬದಲ್ಲಿ ಜನಿಸಿದವರು. ಬಡತನ ಅವರ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗಲಿಲ್ಲ. ಅಂತೇಯೆ ಪಿ.ಎಚ್.ಡಿ. ವರೆಗಿನ ಉನ್ನತ ಶಿಕ್ಷಣವನ್ನು ಪಡೆಯಲು ಸಾಧ್ಯವಾಯಿತು. ಆರ್ಥಿಕ ಸಮಸ್ಯೆ ಅನ್ನುವದಕ್ಕಿಂತ ಬೇರೆ ಬೇರೆ ತೊಂದರೆಗಳನ್ನು, ದುರ್ಧರ ಪ್ರಸಂಗಗಳನ್ನು ಎದುರಿಸಬೇಕಾಯಿತು. ಅವನ್ನು ಜಾಣ್ಮೆಯಿಂದ, ಸಂಯಮದಿಂದ ಎದುರಿಸಿ ಗೆದ್ದವರು. ಐದನೆಯ ತರಗತಿಯಲ್ಲಿ ಓದುತ್ತಿರುವಾಗಲೆ ಜನ್ಮಕೊಟ್ಟ ಪ್ರೀತಿಯ ತಾಯಿಯನ್ನು, ಅಕ್ಕರೆಯ ಅಜ್ಜಿಯನ್ನು ಕಳೆದುಕೊಂಡರು. ಆಗಿನಿಂದ ಆರಂಭವಾಯಿತು. ಶಾಂತಾ ಅವರ ಕಷ್ಟದ ಜೀವನ. ಒಂದೆಡೆ ಅವ್ವ, ಅಜ್ಜಿಯರ ಮಮತೆಯಿಲ್ಲದ ಕೊರಗು, ಇನ್ನೊಂದೆಡೆ ಮನೆತನದ ಜವಾಬ್ದಾರಿಯನ್ನು ನಿಭಾಯಿಸುವ ಒತ್ತಡ. ಇಂಥ ಉಭಯ ಸಂಕಟ ಅವರನ್ನು ಬಹುವಾಗಿ ಭಾದಿಸಿದೆ. ಉಂಡು, ಆಡಿ, ಓದುತ್ತ ಗೆಳತಿಯರೊಡನೆ ಸಂತೋಷದಿಂದ ಕಾಲ ಕಳೆಯಬೇಕಾದ ಬಾಲ್ಯಾವಸ್ಥೆಯಲ್ಲಿ ಅಡುಗೆ ಮಾಡಿ ಶಾಲೆಗೆ ಹೋಗಬೇಕಾದ ದುಃಸ್ಥಿತಿ ಅವರಿಗೆ ಒದಗಿ ಬಂದುದನ್ನು ಕೇಳಿ ಯಾರಿಗೆ ತಾನೆ ಕನಿಕರ ಬರದು! ಹೇಳಿ.

ಅವರು ತಮ್ಮ ವೃತ್ತಿಯನ್ನು ಪ್ರೀತಿಸಿದರು. ಅದರಂತೆ ವಿದ್ಯಾರ್ಥಿಗಳ ಬಗೆಗೂ ಅಪಾರವಾದ ಪ್ರೀತಿಯುಳ್ಳವರಾಗಿದ್ದರು. "ವಿದ್ಯಾರ್ಥಿಗಳು ಶಾಲೆಯೆಂಬ ತೋಟದಲ್ಲಿ ಅರಳಿದ ಸುಂದರ ಹೂಗಳು ಇದ್ದಂತೆ. ಸದಾ ಹಸನ್ಮುಖದ ಅವರೊಂದಿಗೆ ಶಿಕ್ಷಕರು ಉತ್ತಮ ಒಡನಾಟವನ್ನು ಹೊಂದಿರಬೇಕು. ಬಿಳಿಹಾಳೆಯಂತೆ ಶುಭ್ರವಾದ ಆ ಮಕ್ಕಳ ಮನಸ್ಸಿನಲ್ಲಿ ಒಳ್ಳೆಯದನ್ನು ಬರೆಯಬೇಕು. ಅದು ಅಚ್ಚಾಗಿ ಬಿಡುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಸಂಸ್ಕಾರವನ್ನು ಕೊಡುವುದರಿಂದ ಅವರ ಭವಿಷ್ಯ ಉಜ್ವಲವಾಗುತ್ತದೆ. ವಿದ್ಯಾರ್ಥಿಗಳೇ ಶಿಕ್ಷಕರ ಬದುಕಿನ ಜೀವಾಳ. ಶಿಕ್ಷಕರಾದವರು ವಿದ್ಯಾರ್ಥಿಗಳ ಜೀವನವನ್ನು ಚೆನ್ನಾಗಿ ರೂಪಿಸಿದರೆ ಹೊಸ ಜಗತ್ತನ್ನೇ ಸೃಷ್ಟಿಸಿದಂತೆ. ಶಾಲೆ ಒಂದು ದೇವಾಲಯ. ಶಿಕ್ಷಕರು ಮಕ್ಕಳನ್ನು ದೇವರಂತೆ ಕಾಣಬೇಕು. ಅಂದಾಗ ಶಿಕ್ಷಕರ ಜೀವನ ಪಾವನವಾಗುತ್ತದೆ. ಒಬ್ಬ ಆದರ್ಶ ಶಿಕ್ಷಕ ವಿದ್ಯಾರ್ಥಿಯ ಜೀವನವನ್ನು ಪರಿವರ್ತಿಸುವುದಲ್ಲದೆ, ಉತ್ತಮ ನಾಗರಿಕನನ್ನಾಗಿಸಿ ದೇಶಕ್ಕೆ ಒಳ್ಳೆಯ ಕೊಡುಗೆಯನ್ನು

Scanned with OKEN Scanner

ಕೊಡಬಲ್ಲನು" ಎನ್ನುವ ಮೌಲಿಕ ವಿಚಾರಗಳನ್ನು ಹೇಳುತ್ತ ಬಂದವರು.

ವಿದ್ಯಾರ್ಥಿಗಳು ಹಾಗೂ ತಮ್ಮ ನಡುವಿನ ಸಂಬಂಧವನ್ನು ಕುರಿತು ಅವರು ವ್ಯಕ್ತಪಡಿಸಿದ ವಿಚಾರಗಳು ಉಲ್ಲೇಖ ನಿಯವಾದವುಗಳು. 'ನನ್ನ ವೃತ್ತಿ ಜೀವನದಲ್ಲಿ ವಿದ್ಯಾರ್ಥಿಗಳು ತೋರಿಸಿದ ಪ್ರೀತಿ, ಮಮತೆಯನ್ನು ನಾನೆಂದು ಮರೆಯಲಾರೆ. ಅಂತಹ ಕೆಲಕ್ಷಣಗಳು ಇನ್ನೂ ಅಚ್ಚಹಸಿರಾಗಿವೆ. ನಾನು ಹೊಸದಾಗಿ ಶಿಕ್ಷಕಿಯಾಗಿ ನೇಮಕಗೊಂಡ ಸಂದರ್ಭವದು. ಸೆಪ್ಟಂಬರ್ ೫, ಶಿಕ್ಷಕರ ದಿನಾಚರಣೆ ಯಂದು ಮಂದ ಬುದ್ಧಿಯ ವಿದ್ಯಾರ್ಥಿಯೊಬ್ಬ ನನಗೆ ಅಚ್ಚರಿಯಾಗುವಂತೆ ದೊಡ್ಡ ಹೂವಿನ ಹಾರವೊಂದನ್ನು ನನಗೆ ಹಾಕಿ ಹರ್ಷವ್ಯಕ್ತಪಡಿಸಿದ. ಆ ಕ್ಷಣವನ್ನು ನಾನೆಂದು ಮರೆಯುವದಿಲ್ಲ. ವಿದ್ಯಾರ್ಥಿಗಳು ನನ್ನ ಮಕ್ಕಳು ಅವರು ನನ್ನನ್ನು ತಾಯಿಯಂತೆ ಕಾಣುತ್ತಾರೆ. ನನ್ನ ಹಾಗೂ ಅವರ ನಡುವಿನ ಒಡನಾಟ ಆತ್ಮೀಯವಾಗಿದೆ. ಅವರು ನಾನು ನೀಡಿದ ಸಲಹೆ ಸೂಚನೆಗಳನ್ನು ಶ್ರದ್ಧೆಯಿಂದ ಪಾಲಿಸುತ್ತಾರೆ. ನಾನು ನನ್ನ ವಿದ್ಯಾರ್ಥಿಗಳಿಗೆ ಕೇವಲ ಶಿಕ್ಷಕಿ ಅಲ್ಲ, ಅವರ ತಾಯಿ ಎಂದು ಹೇಳುವ ಡಾ. ಶಾಂತಾವರ ಮನದಾಳದ ಮಾತುಗಳು ಇಡೀ ಶಿಕ್ಷಕ ಕುಲಕ್ಕೆ ಪ್ರೇರಣೆಯಾಗಬೇಕಿದೆ. ಬಡ ವಿದ್ಯಾರ್ಥಿಗಳಿಗೆ ಪುಸ್ತಕ, ಪೆನ್ನು ಕೊಡಿಸುವುದರ ಜೊತೆಗೆ ಅವರ ಶಿಕ್ಷಣಕ್ಕೆ ಅನುಕೂಲವಾಗಲೆಂದು ಹಣದ ಸಹಾಯ ಮಾಡಿದ ಶಾಂತಾವರ ಔದಾರ್ಯತನವನ್ನು ಸ್ತುತಿಸಲೇಬೇಕು.

ಅವರ ಕರ್ತವ್ಯ ನಿಷ್ಠೇ, ಪರಿಣಾಮಕಾರಿಯಾದ ಬೋಧನೆ, ವಿದ್ಯಾರ್ಥಿಗಳಿಗೆ ಒಳ್ಳೆಯ ಸಂಸ್ಕಾರ ನೀಡುವ ರೀತಿ, ಮಕ್ಕಳನ್ನು ಪ್ರೀತಿಸುವ ಮತ್ತು ಅವರಿಗೆ ಸಹಾಯ ಮಾಡುವ ಉದಾತ್ತ ಗುಣವನ್ನು ಮೆಚ್ಚಿ, ಸಂಸ್ಥೆ ಶಾಂತಾ ಅವರನ್ನು ೧೯೯೨ ರಲ್ಲಿ ಮುಖ್ಯ ಗುರುಮಾತೆ (ಮುಖ್ಯೋಧ್ಯಾಪಕಿ) ಯನ್ನಾಗಿ ನೇಮಿಸಿತು. ಅವರು ಅಧಿಕಾರ ವಹಿಸಿಕೊಂಡಾಗ ಅನುಭವಿಸಿದ ನೋವು, ಆತಂಕ, ತಲ್ಲಣಗಳು ಹೇಳತೀರವು. ಅವರಿಗೆ ಆಗದವರು, ಅವರ ಏಳಿಗೆಯನ್ನು ಕಂಡು ಸಹಿಸದವರು ಕೊಟ್ಟ ಕಿರುಕಳ, ಮಾಡಿದ ಒಳಸಂಚು, ಪಿತೂರಿಗಳಷ್ಟೋ. ನಾನು ಈ ಲೇಖನ ಬರೆಯುವ ಮುನ್ನ ಮೇಡಂರನ್ನು ಪೋನ್ ಮೂಲಕ ಮಾತನಾಡಿಸಿದಾಗ ಅವರು ತಾವು ಎದುರಿಸಿದ ಕಷ್ಟ-ಕಾರ್ಪಣ್ಯಗಳನ್ನು ನನ್ನ ಜೊತೆ ಹಂಚಿಕೊಂಡರು. 'ಆ ಜನ ನನಗೆ ಕೊಡಬಾರದ ನೋವನ್ನು ಕೊಟ್ಟರು. ಏಕಾಂಗಿಯನ್ನಾಗಿ ಮಾಡಿದರು, ಹೆದರಿಸಿದರು. ತಾನಾಗಿಯೇ ನೊಂದು ಹೆದರಿ ಮುಖ್ಯ ಗುರುಮಾತೆ ಹುದ್ದೆ ಬಿಟ್ಟುಹೋಗಲಿ ಎಂದು ಯಾರ ಸಹಕಾರ ನನಗೆ ಸಿಗದಂತೆ ಮಾಡಿದರು' ಎಂದು ಅವರು ಹೇಳಿದ್ದನ್ನು ಕೇಳಿ ನಾನು ದಂಗಾದೆ. ಕೆಡುಕನ್ನುಂಟು ಮಾಡುವವರ ನಡುವೆಯ, ಕಷ್ಟ ಕೊಡುವವರ ಮಧ್ಯದಲ್ಲಿದ್ದುಕೊಂಡೇ ಅವರಿಂದ ಒದಗಿ ಬಂದ ಆಪತ್ತುಗಳನ್ನು ಮೆಟ್ಟಿನಿಂತು ಗೆದ್ದ ಜಯಶೀಲೆ ಶಾಂತಾ.

Scanned with OKEN Scanner

'ಉಪಕಾರ ಸ್ಮರಣೆ' ಅವರ ವ್ಯಕ್ತಿತ್ವದ ಇನ್ನೊಂದು ವಿಶೇಷತೆ. ಈ ಮಾತು ಹೇಳಲು ಕಾರಣವಿಷ್ಟೇ ಕಲಿಯುಗದಲ್ಲಿ 'ಉಪಕಾರ ಮಾಡಿದವರಿಗೆ ಅಪಕಾರ ಮಾಡುವ ಜನರೆ ಜಾಸ್ತಿ ಇದ್ದೇವೆ. ಇಂಥವರ ನಡುವೆ ಭಿನ್ನರಾಗಿ ತಮ್ಮ ಬಾಲ್ಯ, ಯೌವನ, ವಿದ್ಯಾರ್ಥಿಜೀವನ, ವೃತ್ತಿ ಬದುಕು, ಸಾಮಾಜಿಕ ಹಾಗೂ ಧಾರ್ಮಿಕ ಜೀವನ – ಈ ಎಲ್ಲ ಸಂದರ್ಭಗಳಲ್ಲಿ ಸಹಕರಿಸಿದ, ಸಹಾಯ ಮಾಡಿದ ಸಹಪಾಠಿಗಳ, ಸ್ನೇಹಿತೆಯರ, ವಿದ್ಯಾಗುರುಗಳ ಗುರುಹಿರಿಯರ, ಧರ್ಮಮುಖಂಡರ ಹಾಗೂ ಹಿತೈಷಿಗಳ ಹೆಸರುಗಳನ್ನು ಶಾಂತಾರು ಅಭಿಮಾನದಿಂದ ಹೇಳಿದ್ದನ್ನು ಇಲ್ಲಿ ಸ್ಮರಿಸಲೇಬೇಕು. ಸಾಂದರ್ಭಿಕವಾಗಿ ತಮಗೆ ನೆರವಾದ ವ್ಯಕ್ತಿಗಳ ಹೆಸರುಗಳ ದೊಡ್ಡ ಪಟ್ಟಿಯೇ ಅವರ ಬಳಿಯಿದೆ. 'ನೆನೆಯುವದೆ ಉದಯ ಮರೆಯುವದೆ ಅಸ್ತಮಾನ' ಎಂಬ ನಾಣ್ನುಡಿಯಂತೆ ಜೀವನದಲ್ಲಿ ತಮಗೆ ನೆರವಾದವರನ್ನು ನೆನೆಯುವುದರ ಮೂಲಕ ಡಾ. ಶಾಂತಾವರು ಜೀವಂತವಾಗಿದ್ದಾರೆ.

ಸಮಾಜ ಜೀವಿಯಾದ ಅವರು ಸದಾ ಸಮಾಜಮುಖಿಯಾಗಿ ಯೋಚಿಸುತ್ತಲೆ ಬಂದವರು. ಸಮಾಜಕ್ಕೆ ನಾವು ಏನಾದರೂ ಕೊಟ್ಟರೆ ಅದು ನಮಗೂ ಏನನ್ನಾದರೂ ಕೊಡುತ್ತದೆ ಎಂಬ ಅರಿವು ನಮ್ಮಲ್ಲಿರಬೇಕು ಎಂಬ ಅಭಿಪ್ರಾಯ ಅವರದು. ಆಕಳು ಎಂದೂ ತನ್ನ ಹಾಲನ್ನು ತಾನು ಕುಡಿಯುವದಿಲ್ಲ. ಮರ ತನ್ನ ನೆರಳನ್ನೆಂದೂ ತಾ ಅನುಭವಿಸುವದಿಲ್ಲ, ಸಸ್ಯಗಳು ಪರಿಮಳವನ್ನು ತಾನೆ ಮೂಸಿಸುವದಿಲ್ಲ. ಸಸ್ಯಗಳು ತಾವು ಬಿಟ್ಟ ಫಲಗಳನ್ನು ತಾವೇ ತಿನ್ನುವದಿಲ್ಲ. ಬದಲಾಗಿ ಅವು ಮನುಷ್ಯನಿಗೆ ನೀಡುತ್ತವೆ. ಅವುಗಳಲ್ಲಿರುವ ಪರೋಪಕಾರ, ನಿಃಸ್ವಾರ್ಥ ಗುಣ ಮಾನವರಲ್ಲಿ ಬರಬೇಕಾಗಿದೆ. ಜೀವನವೆಂದರೆ ಕೇವಲ ನಮಗಾಗಿ ಬದುಕುವದಲ್ಲ, ಪರರಿಗಾಗಿ ಬದುಕಬೇಕು. ಸಮಾಜದಲ್ಲಿ ಹುಟ್ಟಿದ ನಾವು ಸಮಾಜಕ್ಕೆ ಪರಿಮಳ ನೀಡುವ ಪುಷ್ಪವಾಗಬೇಕು ಎನ್ನುವ ಅವರ ವೈಚಾರಿಕ ವಿಚಾರಗಳು ಮಾನ್ಯವಾಗುವಂಥವುಗಳು.

ದೇವರು, ಧರ್ಮ ಆಧ್ಯಾತ್ಮ ವಿಷಯಗಳಲ್ಲೂ ತುಂಬಾ ಶ್ರದ್ಧೆಯುಳ್ಳವರು. ಬಾಲ್ಯದಿಂದಲೇ ಧಾರ್ಮಿಕ ಸಂಸ್ಕಾರದಲ್ಲಿ ಬೆಳದವರು. ಹೈಸ್ಕೂಲನಲ್ಲಿ ಓದುತ್ತಿದ್ದಾಗ ಬೈಬಲ್ ಸ್ಟಡಿಯಲ್ಲಿ ಮೊದಲ ಸ್ಥಾನ ಪಡೆಯುತ್ತಿದ್ದ ಅವರು ಮಂಗಳೂರಿನಲ್ಲಿರುವ ಕ್ರೈಸ್ತ ಧರ್ಮಗುರುಗಳಿಗೆ ನೀಡುವ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆಯಬೇಕೆನ್ನುವ ಗುರಿ ಹೊಂದಿದ್ದರು. ಆದರೆ ಅದು ಕಾರಣಾಂತರಗಳಿಂದ ಸಾಧ್ಯವಾಗಲಿಲ್ಲ. ಪ್ರಾಥಮಿಕ ಶಾಲಾ ಶಿಕ್ಷಕಿಯಾದರೂ ಚರ್ಚಗಳಲ್ಲಿ ಹಲವು ವರ್ಷಗಳ ಕಾಲ ಧಾರ್ಮಿಕ ಮನೋಭವನೆಯಿಂದ ಸೇವೆ ಸಲ್ಲಿಸಿದ್ದಾರೆ. ದೇವರ (ಯೇಸು ಕ್ರಿಸ್ತನ) ಸಂದೇಶಗಳನ್ನು ಬಿತ್ತರಿಸುವ ಪವಿತ್ರ ಕೈಂಕರ್ಯದಲ್ಲಿ ತೊಡಗಿಸಿಕೊಂಡಿರುವರು. ತಮ್ಮ ಧರ್ಮಸಂಸ್ಥೆಯ ಬಿಷಪ್‌ರಾದ ರೈಟ್ ರೆವರೆಂಡ್ ರವಿಕುಮಾರ, ಜೆ. ನಿರಂಜನ ಹಾಗೂ ರೆವರೆಂಡ್ ಹನ್ನಾ. ಆರ್. ನಿರಂಜನ ಅವರೊಂದಿಗೆ ಪವಿತ್ರ ಧಾರ್ಮಿಕ ಸ್ಥಳಗಳಾದ ಈಜಿಪ್ಟ್

ಇಸ್ರಾಯಿಲ್, ಜೋರ್ಡಾನ್ ಹಾಗೂ ಪ್ಯಾಲಿಸ್ತೇನ್ ಮೊದಲದ ವಿದೇಶಗಳಿಗೆ ಹೋಗಿ ಬರುವ ಮೂಲಕ ಧಾರ್ಮಿಕ ಮನೋಭಾವನೆಯನ್ನು ಹೆಚ್ಚಿಸಿಕೊಂಡರು. ಬೈಬಲ್‌ನಲ್ಲಿ ಬರುವ ಹಳೆಯ ಒಡಂಬಡಿಕೆ (ಯೇಸುವಿನ ಪೂರ್ವ ಜನರ ಚರಿತ್ರೆ) ಹಾಗೂ ಹೊಸ ಒಡಂಬಡಿಕೆ (ಯೇಸುವಿನ ಜನನ, ಮರಣ ಹಾಗೂ ನಂತರದ ಚರಿತ್ರೆ) ಭಾಗಗಳ ಕುರಿತು ಕಂಠೋಕ್ತವಾಗಿ ಮಾತನಾಡುವ ಪ್ರತಿಭೆ ಅವರಾಗಿದ್ದಾರೆ.

ಇನ್ನೂ ಒಂದು ಅಚ್ಚರಿಯ ಸಂಗತಿಯೇನಂದರೆ, ಅವರು ತಮ್ಮ ಶಿಕ್ಷಕ ವೃತ್ತಿ, ಉನ್ನತ ವಿದ್ಯಾಭ್ಯಾಸ, ಸಾಮಾಜಿಕ–ಧಾರ್ಮಿಕ ಕಾರ್ಯಗಳ ಜೊತೆ ಜೊತೆಗೆ ಸಂವೇದನಾಶೀಲ ಮನೋಭಾವದ ಸಾಹಿತಿಯಾಗಿ ಹೊರಹೊಮ್ಮಿದ್ದು. ಒಬ್ಬ ಕವಯಿತ್ರಿಯಾಗಿ ತಮ್ಮ ಅಂತರಾಳದ ಮನದಾಳದ ನೋವು–ನಲಿವುಗಳನ್ನು ಅರ್ಥ ಪೂರ್ಣವಾಗಿ ಶಬ್ಧಗಳಲ್ಲಿ ಕಾವ್ಯಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ತಮ್ಮ ಮುದ್ದಿನ ವಿದ್ಯಾರ್ಥಿಗಳಿಗಾಗಿ ಕೆಲವು ಹಾಡು ಕವಿತೆಗಳನ್ನು ರಚಿಸಿರುವರು. ಶಾಂತಾರವರ ಕೆಲವು ಕವಿತೆಗಳು ಈಗಾಗಲೇ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗುವ ಮೂಲಕ ಅವರನ್ನ ಸಾಹಿತ್ಯಾಸಕ್ತರಿಗೆ ಪರಿಚಯಿಸಿವೆ. ವಿವಿಧ ಕವಿಗೋಷ್ಠಿಗಳಲ್ಲಿ ಸಾಹಿತ್ಯ ಸಮ್ಮೇಳನಗಳಲ್ಲಿ ಕಾವ್ಯ ವಾಚಿಸುವದರಿಂದ ಕಾವ್ಯ ಪ್ರೀಯರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅವರ ಪ್ರಥಮ ಕವನ ಸಂಕಲನ 'ತೇಜ' ಲೋಕಾರ್ಪಣೆಯಾಗಿದೆ. ಅನೇಕ ವಿಷಯಗಳನ್ನು ಕುರಿತು ಬರೆದ ಕವಿತೆಗಳು ಸರಳವಾಗಿ ಹಾಗೂ ಅಷ್ಟೇ ಸ್ಪುಟವಾಗಿರುವುದನ್ನು ನೋಡಬಹುದಾಗಿದೆ.

"ಮಕ್ಕಳು ದೇವರ ತೋಟದ ಹೂವುಗಳು
ಗುರುಗಳು ಅದರ ಮಾಲಿಗಳು
ಮುದವ ನೀಡುವ ಸಸಿಗಳು
ಬೆಳೆವ ಕಲ್ಪತರುಗಳು"

"ಪ್ರಯತ್ನವೆಂಬುದು ಬೀಜದ ಹಾಗೆ
ಬಿತ್ತುತ್ತಲೇ ಇರಬೇಕು
ಚಿಗುರಿದರೆ ಮರವಾಗಲಿ
ಇಲ್ಲದಿದ್ದರೆ ಗೊಬ್ಬರವಾಗಲಿ"

"ಕನಸು ಕಾಣು
ನಿದ್ದೆಯಲ್ಲಿ ಕಾಣುವ ಕನಸಲ್ಲ
ಯಶಸ್ಸನ್ನು ಅನುಭವಿಸುವುದಕ್ಕೆ
ಕಷ್ಟದ ಹಾದಿ ಸವೆಸಲೇಬೇಕು."

Scanned with OKEN Scanner

ಶಿಕ್ಷಕರ ಜವಾಬ್ದಾರಿ, ನಿರಂತರ ಪ್ರಯತ್ನದ ಪರಿಣಾಮ ಹಾಗೂ ಕನಸಿನ ಸ್ವರೂಪ – ಇವನ್ನು ತುಂಬಾ ಪರಿಣಾಮಕಾರಿಯಾಗಿ ಹೇಳಲಾಗಿದೆ.

ಸಾಹಿತ್ಯ ಸಹೃದಯದ ಮನಸ್ಸನ್ನು ಅರಳಿಸುತ್ತದೆ. ಮುದ ನೀಡುತ್ತದೆ. ಅವನನ್ನು ಪರಿವರ್ತಿಸುವ ಶಕ್ತಿ ಅದಕ್ಕಿದೆ. ನಾನು ನಿವೃತ್ತಿಯ ನಂತರ ಸಾಹಿತ್ಯ ಕ್ಷೇತ್ರಕ್ಕೆ ಹೆಚ್ಚಿನ ಸಮಯವನ್ನು ವಿನಿಯೋಗಿಸುವೆ. ನಲವತ್ತು ವರ್ಷಗಳ ವೃತ್ತಿ ಜೀವನವನ್ನು ಚಿಕ್ಕಮಕ್ಕಳ ನಡುವೆ ಕಳೆದುದರಿಂದ ಅವರ ಕುರಿತಾಗಿಯೇ ಸಾಹಿತ್ಯ ಸಂಕಲ್ಪ ಡಾ. ಶಾಂತಾ ಅವರದು.

ಡಾ. ಶಾಂತಾ ಕರಡಿಗುಡ್ಡ ಅವರ ವಿವೇಚನ್ಮಾಕ ವಿಚಾರಗಳು ಬದುಕಿನ ಅಪಾರ ಅನುಭವದಿಂದ ಹರಳುಗೊಂಡು ಗಟ್ಟಿಯಾದ ಅವರ ವೈಚಾರಿಕ ಚಿಂತನೆಯ ನುಡಿ ಜ್ಯೋತಿಗಳು ಅಜ್ಞಾನದ ಕತ್ತಲೆಯನ್ನು ಹೊಡೆದೊಡಿಸಿ ಸುಜ್ಞಾನದ ಬೆಳಕನ್ನು ಹೊತ್ತಿಸಬಲ್ಲವಾಗಿವೆ.

- ಕಟ್ಟಿಗೆ ಸುಟ್ಟಾಗ ಬೂದಿಯಾಗುತ್ತದೆ. ಆದರೆ ಇಟ್ಟಿಗೆ ಸುಟ್ಟಾಗ ಗಟ್ಟಿಯಾಗುತ್ತದೆ. ಜೀವನದಲ್ಲಿ ನಾವು ಸುಟ್ಟು ಬೂದಿಯಾಗದೆ, ಕಷ್ಟಗಳನ್ನು ಎದುರಿಸಿ ಮುನ್ನುಗ್ಗಿದಾಗ ಮಾತ್ರ ಸುಟ್ಟ ಇಟ್ಟಿಗೆಯಂತೆ ಗಟ್ಟಿಯಾಗುತ್ತೇವೆ.
- ಉಳಿಯ ಹಲವಾರು ಪೆಟ್ಟು ಸಹಿಸಿ ದೇವರ ಮೂರ್ತಿಯಾದ ಶಿಲೆಯಂತೆ, ಹಲವು ಪೆಟ್ಟು, ನೋವು ಸಹಿಸಿಕೊಂಡು ಸಾಧನೆಗೆ ಪ್ರಯತ್ನಿಸಬೇಕು.
- ದೇವರ ದಯವೇ ಜ್ಞಾನದ ಮೂಲ. ದೇವರ ದಯೆ ಸದಾ ನಮ್ಮನ್ನು ಕಾಪಾಡಿ ರಕ್ಷಿಸುತ್ತದೆ ಎಂಬ ನಂಬಿಕೆ ನಮ್ಮದಾಗಬೇಕು.
- ಜೀವನದಲ್ಲಿ ಹತಾಶರಾಗಬಾರದು, ಕೊನೆಯ ಕ್ಷಣದವರೆಗೂ ಹೋರಾಟ ಮಾಡಬೇಕು.
- 'ಜೀವನವೆಂದರೆ ಕೇವಲ ನಮಗಾಗಿ ಬದುಕುವದಲ್ಲ, ಬೇರೆಯವರಿಗಾಗಿ ಬದುಕಬೇಕು.
- ಆತ್ಮಶಕ್ತಿಯಿಂದ ಜಗತ್ತನ್ನೇ ಗೆಲ್ಲಲು ಸಾಧ್ಯ, ಆತ್ಮಶಕ್ತಿ ಬರಬೇಕಾದರೆ ಸತ್ಯ, ನ್ಯಾಯ, ಧರ್ಮ ಇವು ನಮ್ಮ ಜೀವನ ಮಂತ್ರವಾಗಬೇಕು.
- ಗುರಿ ಮುಟ್ಟುವವರೆಗೂ ಅಭಿವೃದ್ಧಿ ಕಾಣುವವರೆಗೂ ನಾವು ಓಡಬೇಕು.
- ಬದುಕು ನಿಂತ ನೀರಾಗಬಾರದು, ಸದಾ ಹರಿಯುವ ಶುದ್ಧ ನೀರಾಗಬೇಕು.

ನಿಜಕ್ಕೂ ಇವು ಮೌಲಿಕ ವಿಚಾರಗಳು, ಇವನ್ನ ಅಳವಡಿಸಿಕೊಂಡರೆ ನಮ್ಮ ಬಾಳು ಅರ್ಥಪೂರ್ಣವಾಗುವದಲ್ಲದೆ. ಯಶಸ್ಸನ್ನು ಹೊಂದಬಹುದಾಗಿದೆ.

'Where there is a will, there is a way' [ಎಲ್ಲಿ ಮನಸ್ಸಿದೆಯೊ ಅಲ್ಲಿ ಮಾರ್ಗವಿದೆ] ಎಂಬ ಗಾದೆ ಮಾತಿನಂತೆ ಸಾಧಿಸಬೇಕೆಂಬ ಮನೋಭಾವವುಳ್ಳ

Scanned with OKEN Scanner

ಡಾ. ಶಾಂತಾವರು ಹಲವಾರು ಮಾರ್ಗಗಳನ್ನು ಕಂಡುಕೊಂಡು ಮುನ್ನಡೆದಿದ್ದಾರೆ. ಅವರ ಸಾಧನೆ, ಕೊಡುಗೆಗಳಿಗೆ ಅರ್ಹ ಪ್ರಶಸ್ತಿಗಳು ಸಂದಿವೆ. ವಿಶೇಷವಾಗಿ ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ನಿಃಸ್ವಾರ್ಥ ಸೇವೆಗಾಗಿ ಬಾದಾಮಿ ತಾಲೂಕಿನ 'ಆದರ್ಶ ಶಿಕ್ಷಕಿ', ಬಾಗಲಕೋಟ ಜಿಲ್ಲಾ 'ಅತ್ಯುತ್ತಮ ಶಿಕ್ಷಕಿ', ರಾಜ್ಯಮಟ್ಟದ 'ಉತ್ತಮ ಶಿಕ್ಷಕಿ', 'ರಾಷ್ಟ್ರ ಪ್ರಶಸ್ತಿ' ಇವೆಲ್ಲ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಅಲ್ಲದೆ 'ಡಾ. ರಾಧಾಕೃಷ್ಣ ಸ್ಮರಣಾರ್ಥ ಕಲ್ಚರಲ್ ಅಕಾಡೆಮೆ ಪ್ರಶಸ್ತಿಯನ್ನು ಪಡೆದಿರುವರು. ಇತರೆ ಕಾರ್ಯಸಾಧನೆಗಾಗಿ 'ಕರ್ನಾಟಕ ಜನಸೇವಾ ಪ್ರಶಸ್ತಿ' ಕೂಡಾ ಅವರಿಗೆ ಲಭಿಸಿದೆ. ಈಗಾಗಲೆ ಮೂವತ್ತಕ್ಕೂ ಹೆಚ್ಚು ಸಂಘ-ಸಂಸ್ಥೆಗಳು, ಮಠ-ಮಂದಿರಗಳು ಡಾ. ಶಾಂತಾ ಕರಡಿಗುಡ್ಡ ಅವರನ್ನು ಸನ್ಮಾನಿಸಿ ಗೌರವಿಸುವ ಮೂಲಕ ತಮ್ಮ ಘನತೆಯನ್ನು ಹೆಚ್ಚಿಸಿಕೊಂಡಿವೆ.

ಇಂಥ ಓರ್ವ ಸಾಧಕಿ, ಆದರ್ಶ ಶಿಕ್ಷಕಿ ೪೦ ವರ್ಷಗಳ ಕಾಲ ಸೇವೆ ಸಲ್ಲಿಸಿ ೩೦-೦೬-೨೦೧೮ ರಂದು ವಿಶ್ರಾಂತ (ನಿವೃತ್ತ) ಜೀವನಕ್ಕೆ ಕಾಲಿರಿಸಿದ್ದಾರೆ. ನಿವೃತ್ತಿಯ ಸ್ಮರಣಾರ್ಥವಾಗಿ ಅವರ ಅಭಿಮಾನಿಗಳು, ವಿದ್ಯಾರ್ಥಿಗಳು 'ಅಭಿನಂದನಾ ಸಮಾರಂಭ'ವನ್ನು ಏರ್ಪಡಿಸಿ, 'ಅಭಿನಂದನ ಗ್ರಂಥ'ವನ್ನು ಸಮರ್ಪಿಸುತ್ತಿದ್ದಾರೆ. ಇದು ಅವರ ಸಾರ್ಥಕ ಬದುಕನ್ನು ಸಾಕ್ಷೀಕರಿಸುವಂತಿದೆ.

ಕೊನೆಯದಾಗಿ, ಡಾ. ಶಾಂತಾ ಕರಡಿಗುಡ್ಡ ಅವರ ವಿಶ್ರಾಂತಿಯ ಜೀವನ ಸುಖಕರವಾಗಿರಲಿ, ಭಗವಂತ ಅವರಿಗೆ ಹೆಚ್ಚಿನ ಆಯುಷ್ಯ ಆರೋಗ್ಯವನ್ನು ದಯಾಪಾಲಿಸಿ ಅವರು ಸಾಮಾಜಿಕ-ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಸೇವೆ ಸಲ್ಲಿಸಲು ಆಶೀರ್ವದಿಸಲೆಂದು ಪ್ರಾರ್ಥಿಸುವೆ.

■■

Scanned with OKEN Scanner

# ಸಾರ್ಥಕ ಬದುಕು



ಗುಳೇದಗುಡ್ಡ ಸಾಂಸ್ಕೃತಿಕ ಪರಂಪರೆಗೆ ಹೆಸರುವಾಸಿಯಾಗಿದೆ. ಇಲ್ಲಿನ ಜನ ಹೃದಯ ಸಿರಿವಂತರು. ಜಾತಿ, ಧರ್ಮ ಬೇಧವಿಲ್ಲದೇ ಭಾವಕ್ಯೆತೆಯಿಂದ ಕೂಡಿ ಬಾಳಿ ಬದುಕುತ್ತಿರುವವರು. ಇಲ್ಲಿನ ಬಾಸೆಲ್ ಮಿಷನ್ ಕನ್ನಡ ಗಂಡು ಮಕ್ಕಳ ಶಾಲೆಯ ಮುಖ್ಯಗುರುಮಾತೆಯವರಾದ ಡಾ. ಶಾಂತಾ ಕರಡಿಗುಡ್ಡ ಅವರು ಈ ನಾಡು ಕಂಡ ಅತ್ಯುತ್ತಮ ಶಿಕ್ಷಕಿಯರು. ಜಿಲ್ಲೆ, ರಾಜ್ಯ, ರಾಷ್ಟ್ರ ಪ್ರಶಸ್ತಿಯನ್ನು ಪಡೆದ ಇವರು ವಿದ್ಯಾರ್ಥಿ ಹಾಗೂ ಶಿಕ್ಷಕರ ಬದುಕಿಗೆ ಮಾದರಿಯಾದವರು. ಶಾಂತಿ, ಸಹನೆ, ತಾಳ್ಮೆ, ಸಮಯೋಚಿತ ಮಾತುಗಳನ್ನು ಮೈಗೂಡಿಸಿಕೊಂಡಿರುವ ಡಾ. ಶಾಂತಾ ಅವರ ಬದುಕು ನಮಗೆಲ್ಲರಿಗೂ ಮಾದರಿ.

ಅವರು ಇಂದು ವೃತ್ತಿಯಿಂದ ನಿವೃತ್ತರಾಗುತ್ತಿದ್ದು ಅವರ ಶಿಷ್ಯಬಳಗ, ಅಭಿಮಾನಿಗಳಿಂದ 'ಸಾರ್ಥಕ ಬದುಕು' ಹೆಸರಿನ ಅಭಿನಂದನಾ ಗ್ರಂಥ ಅರ್ಪಿಸುತ್ತಿರುವುದು ಹರ್ಷದಾಯಕವಾಗಿದೆ. ಡಾ. ಶಾಂತಾ ಕರಡಿಗುಡ್ಡ ಅವರ ಬಹುಮುಖ ಪ್ರತಿಭೆಯನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ಅವರ ಪೂಜ್ಯರು, ಫಾದರ್‌ಗಳು, ಗುರುಗಳು, ನಾಡಿನ ಹೆಸರಾಂತ ಸಾಹಿತಿಗಳು, ಒಡನಾಡಿಗಳು, ಶಿಕ್ಷಕರ ಹಾಗೂ ಶಿಷ್ಯಬಳಗದವರ ಲೇಖನಗಳನ್ನು ಈ ಗ್ರಂಥ ಒಳಗೊಂಡಿದೆ. ಶಿಕ್ಷಣ ಕ್ಷೇತ್ರದಲ್ಲಿ ಈ ಗ್ರಂಥ ಮುಂಬರುವ ಜನಾಂಗಕ್ಕೆ ಕೈಗನ್ನಡಿಯಾಗಬಹುದೆಂಬುದು ನಮ್ಮ ನಂಬಿಕೆ.

– ಸಂಪಾದಕರು